# ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
# KARNATAKA LEGISLATIVE ASSEMBLY, RESEARCH AND REFERENCE BRANCH

## ಪತ್ರಿಕಾ ತುಣುಕುಗಳು
## PAPER CLIPPINGS

ಇಲಾಖೆ / ವಿಷಯ : DEPARTMENT / SUBJECT:

ಪತ್ರಿಕೆಯ ಹೆಸರು : NAME OF THE NEWS PAPER: ದಿನಾಂಕ : DATE: 27/11/20


## ಸಂಪಾದಕೀಯ
## EDITORIAL

# ತೆರಿಗೆ ಸಂಗ್ರಹದ ಏರಿಕೆ

## ಶಾಸಕರ ಅನುದಾನ ಸಮರ್ಪಕ ಬಳಕೆ

**ಕೊ**ರೊನಾ ಲಾಕ್‌ಡೌನ್ ಕಾಲದ ಸ್ಥಗಿತತೆಯಿಂದ ರಾಜ್ಯದ ಆರ್ಥಿಕತೆಯೂ ಚೇತರಿಸಿಕೊಳ್ಳುತ್ತಿದೆ. ಲಾಕ್‌ಡೌನ್ ಜಾರಿಯಿಂದ ಏಪ್ರಿಲ್, ಮೇ ಅವಧಿಯ ತೆರಿಗೆ ಸಂಗ್ರಹ ಬಹುತೇಕ ಶೂನ್ಯವಾಗಿತ್ತು. ನಂತರ ನಿಧಾನ ಏರಿಕೆ ಕಾಣತೊಡಗಿದ್ದು, 3ನೇ ತ್ರೈಮಾಸಿಕದ ಅಂತ್ಯದ ವೇಳೆಗೆ ತೆರಿಗೆ ಸಂಗ್ರಹದಲ್ಲಿ ಶೇ.65ರಷ್ಟು ಗುರಿ ತಲುಪುವ ನಿರೀಕ್ಷೆಯಿದೆ. ಅಪೇಕ್ಷಿತ ತೆರಿಗೆ ಸಂಗ್ರಹ ಪ್ರಮಾಣವನ್ನು ತಲುಪಬೇಕಿದ್ದರೆ ಕಡೆಯ 3 ತಿಂಗಳ ಅವಧಿಯಲ್ಲಿ ಶೇ.35ರಷ್ಟು ಸಂಪನ್ಮೂಲ ಸಂಗ್ರಹಿಸುವ ಕಠಿಣ ಗುರಿಯಿದೆ. ಹಾಗಾಗಿ ಸಂಪನ್ಮೂಲ ಸಂಗ್ರಹ ಕಟ್ಟುನಿಟ್ಟುಗೊಳಿಸುವ ಸವಾಲು ಇನ್ನೂ ಇದೆ. ವಿಶೇಷವೆಂದರೆ, ರಾಜ್ಯ ಸರಕಾರ ಶಾಸಕರ ಕ್ಷೇತ್ರಾಭಿವೃದ್ಧಿ ನಿಧಿಯಡಿ ಪ್ರತಿ ಕ್ಷೇತ್ರಗಳಿಗೆ 50 ಲಕ್ಷ ರೂ. ಬಿಡುಗಡೆ ಮಾಡಿದ್ದು, ನಾನಾ ಇಲಾಖೆಗಳಲ್ಲಿ ಚಾಲ್ತಿಯಲ್ಲಿರುವ ಕಾಮಗಾರಿಗಳನ್ನು ಆದ್ಯತೆ ಮೇರೆಗೆ ಮುಂದುವರಿಸಲು ಸೂಚಿಸಿದೆ.



ಲಾಕ್‌ಡೌನ್ ಕಾಲದ ಮೂರು ತಿಂಗಳಲ್ಲಿ ಚಟುವಟಿಕೆಗಳೇ ಇರಲಿಲ್ಲವಾದ್ದರಿಂದ ಶೂನ್ಯವಾದ ತೆರಿಗೆ ಸಂಗ್ರಹದ ಋಣಾತ್ಮಕ ಪರಿಣಾಮವನ್ನು ಈ ಅವಧಿಯಲ್ಲಿ ತುಂಬಿಕೊಳ್ಳುವ ಪ್ರಯತ್ನ ನಡೆಯುತ್ತಿದೆಯಾದರೂ, ಶಾಲೆಗಳು ಸೇರಿದಂತೆ ಇನ್ನೂ ಹಲವು ಕಾರ್ಯಕ್ಷೇತ್ರಗಳು ಕಾರ್ಯಾರಂಭಿಸಿಲ್ಲ; ಅಥವಾ ನಿಧಾನಗತಿಯಲ್ಲಿರುವುದರಿಂದ ಆರ್ಥಿಕ ಚಲನೆಯ ಚಕ್ರ ತಿರುಗಲಾರಂಭಿಸಿಲ್ಲ. ಕಳೆದ ಒಂದು ತಿಂಗಳಿನಲ್ಲಿ ಬಂದ ಹಬ್ಬದ ಹಂಗಾಮ, ಜನತೆಯನ್ನು ಬಡಿದೆಬ್ಬಿಸಿ ಒಂದಷ್ಟು ಆರ್ಥಿಕ ಚಟುವಟಿಕೆಗೆ ಕಾರಣವಾಗಿದೆ. ವಾಹನ ಮತ್ತು ಆಸ್ತಿ ಖರೀದಿಗೆ ಜನ ಇನ್ನೂ ಒಲವು ತೋರಿಸದ ಕಾರಣ ಈ ವಿಭಾಗದಲ್ಲಿ ತೆರಿಗೆ ಸಂಗ್ರಹವಾಗಿಲ್ಲ. ಕೇಂದ್ರದ ಸಹಾಯಾನುದಾನ ಹಾಗೂ ರಾಜ್ಯದ ಪಾಲಿನ ತೆರಿಗೆ ಹಂಚಿಕೆಯಲ್ಲೂ ಖೋತಾ ಆಗಿದೆ. ಮೂಲಸೌಕರ್ಯ ಕಾರ್ಯಕ್ರಮಗಳು ಹಾಗೂ ಸರಕಾರಿ ಯೋಜನೆಗಳು ಪೂರ್ಣ ಪ್ರಮಾಣದಲ್ಲಿ ಜಾರಿಗೆ ಬರಬೇಕಿದ್ದರೆ ರಾಜಸ್ವ ಸಂಗ್ರಹ ಮೊದಲಿನ ಗತಿಯನ್ನು ತಲುಪುವುದು ಅಗತ್ಯ.

ಒಂದು ರೀತಿಯಲ್ಲಿ ಈ ಬೆಳವಣಿಗೆಯೂ ನಿರೀಕ್ಷಿತ ಅಲ್ಲ. ಲಾಕ್‌ಡೌನ್‌ನ ಎಫೆಕ್ಟ್ ಹೇಗಿತ್ತು ಎಂದರೆ, ವರ್ಷಗಟ್ಟಲೆ ರಾಜ್ಯ ಚೇತರಿಸಿಕೊಳ್ಳಲಾರದು ಎಂದೇ ಎಲ್ಲರೂ ಭಾವಿಸಿದ್ದರು. ಆದರೆ ಜನತೆಯ ಚೈತನ್ಯ ಅದಮ್ಯವಾದುದು. ದೈನಂದಿನ ಕಾರ್ಯಕ್ರಮಗಳು ಮೊದಲಿನಂತೆ ನಡೆಯಬೇಕು, ಜೀವನಚಕ್ರ ಚಲಿಸಲೇಬೇಕು ಎನ್ನುವ ಅನಿವಾರ್ಯ ಹೇಗೂ ಇದೆ; ಜೊತೆಗೆ ಕೊರೊನಾ ವಿರುದ್ಧ ಹೋರಾಡುತ್ತಲೇ ನಿತ್ಯದ ಬದುಕಿಗೆ ಮರಳೋಣ ಎಂಬ ಪ್ರಜ್ಞೆಯೂ ಇದೆ. ಚಟುವಟಿಕೆಗಳು ಹೆಚ್ಚಾದಂತೆ ಆರ್ಥಿಕತೆ ಮೊದಲಿನಂತಾಗುತ್ತದೆ. ಈಗ ಬಿಡುಗಡೆ ಆಗಿರುವ ಶಾಸಕರ ಕ್ಷೇತ್ರಾಭಿವೃದ್ಧಿ ನಿಧಿಯನ್ನು ಸಮರ್ಪಕವಾಗಿ ಬಳಸಿಕೊಳ್ಳುವ ವಿವೇಚನೆಯನ್ನು ತೋರಬೇಕಿದೆ. ರಾಜಸ್ವದ ಸರಿಯಾದ ವಿನಿಯೋಗದ ಉಪಕ್ರಮ ನಡೆಯಬೇಕಾದುದು ಇಂಥ ತಳಮಟ್ಟದ ನಿಧಿಗಳ ಸಮರ್ಪಕ ಅನುಷ್ಠಾನದಲ್ಲಿ. ಹೀಗಾಗಿ ಇದರ ಯೋಗ್ಯ ಅನುಷ್ಠಾನವೊಂದು ಹೊಣೆಗಾರಿಕೆ ಕೂಡ. ಅನುದಾನದ ಬಳಕೆಯ ಸಂದರ್ಭದಲ್ಲಿ ಆಗುವ ಮಾನವ ಸಂಪನ್ಮೂಲದ ಬಳಕೆಯಿಂದ ನಿರುದ್ಯೋಗದ ಬವಣೆ ಸ್ವಲ್ಪ ಮಟ್ಟಿಗೆ ತಪ್ಪಬಹುದು. ಶಾಸಕರು ಇನ್ನು ಅಭಿವೃದ್ಧಿ ಕಾರ್ಯಗಳಿಗೆ ಅನುದಾನದ ಕೊರತೆಯಿದೆ ಎಂಬ ಅಥವಾ ಕೋವಿಡ್‌ನ ನೆಪವನ್ನು ಹೇಳುವಂತಿಲ್ಲ.

ಆರ್ಥಿಕತೆಯ ಚೇತರಿಕೆಯ ಸೂಚನೆಗಳು ನಾನಾ ಸ್ತರದಲ್ಲಿರುತ್ತವೆ- ಅವುಗಳಲ್ಲಿ ರಾಜಸ್ವ ಸಂಗ್ರಹವೂ ಒಂದು. ಇನ್ನೂ ಅನೇಕ ವಲಯಗಳಲ್ಲಿ ಆರ್ಥಿಕತೆ ವೃದ್ಧಿಯಾಗಬೇಕಿದೆ. ಹಾಗೇ ಸರಕಾರದ ಬಳಿ ಸಂಗ್ರಹವಾಗುವ ಹಣ ಅರ್ಥಪೂರ್ಣ ರೀತಿಯಲ್ಲಿ ವಿನಿಯೋಗ ಆಗಬೇಕು. ಶಾಸಕರ, ಸಂಸದರ ಕ್ಷೇತ್ರ ಅನುದಾನಗಳು ಜನತೆಯಿಂದ ಬಂದ ಹಣವನ್ನು ಜನತೆಗಾಗಿ ಖರ್ಚು ಮಾಡುವ ಸಮರ್ಪಕ ವಿಧಾನಗಳಲ್ಲೊಂದು. ಜನಪ್ರತಿನಿಧಿಗಳು ಇಲ್ಲಿ ಮಾಧ್ಯಮಗಳಷ್ಟೇ. ಆದರೆ ಅವರ ಹೊಣೆ ಮಹತ್ತರವಾದುದು. ಕೊರೊನೋತ್ತರ ಕಾಲಘಟ್ಟದಲ್ಲಂತೂ ಅದು ಇನ್ನೂ ಮುಖ್ಯವಾಗಿದ್ದು, ಪುನಶ್ಚೇತನದ ಮೆಟ್ಟಿಲುಗಳಲ್ಲಿ ಒಂದಾಗಿ ಮೂಡಿಯಬೇಕಾಗಿದೆ.